ಓ.ಎಸ್. ನಂಃ **41/2023**
ಡಿ <u>ಡಬ್ಲ್ಯೂಃ **1**</u>

ದಿನಾಂಕಃ 04-12-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿಯ ಪರ ಶ್ರೀ ಡಿ. ಎಂ ವಕೀಲರಿಂದಃ</u>

ನನಗೆ ಓದಲು ಹಾಗೂ ಬರೆಯಲು ಬರುತ್ತದೆ. ನಮ್ಮ ಜಮೀನು ಸರ್ವೆ ನಂ 36 ಇರುತ್ತದೆ. ಅದರ ವಿಸ್ತೀರ್ಣ 09 ಎಕರೆ 28 ಗುಂಟೆ ಇದೆ. ವಾದಿಯರಿಗೆ ಸೇರಿದ ಜಮೀನಿನ ಸರ್ವೆ ನಂ. 37 ಇರುತ್ತದೆ. ಸದರಿ ಸರ್ವೆ ನಂ.37 ರ ಒಟ್ಟು ವಿಸ್ತಿರ್ಣ ನನಗೆ ಗೊತ್ತಿಲ್ಲ, ಸದರಿ ಜಮೀನು ವಾದಿಯರ ಹಿರಿಯರ ಆಸ್ತಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರು ತಮ್ಮ ಆಸ್ತಿಯ ಮಾಲೀಕರು ಹಾಗೂ ಕಬ್ಜೆದಾರರು ಆಗಿರುತ್ತಾರೆ ಮತ್ತು ನಾವು ನಮ್ಮ ಆಸ್ತಿಯ ಮಾಲೀಕರು ಹಾಗೂ ಕಬ್ಜೆದಾರರು ಆಗಿರುತ್ತೇವೆ ಎಂದರೆ ಸರಿ. ನಮ್ಮ ಮತ್ತು ವಾದಿಯ ಜಮೀನು ಒಂದಕ್ಕೊಂದು ಹೊಂದಿಕೊಂಡಿವೆ.

ಸರ್ವೆ ನಂ. 37/1 ರಲ್ಲಿನ 1 ಎಕರೆ 10 ಗುಂಟೆ ಜಮೀನು ದೇವಪ್ಪರವರಿಗೆ ಸೇರಿರುತ್ತದೆ ಎಂದರೆ ಸರಿ. ದೇವಪ್ಪ ಸದರಿ ಜಮೀನಿನ ಮಾಲಿಕ ಹಾಗೂ ಕಬ್ಜೆದಾರ ಆಗಿರುತ್ತಾರೆ ಎಂದರೆ ಸರಿ. ಸರ್ವೆ ನ. 37/1 ರಲ್ಲಿ 3 ಎಕರೆ 29 ಗುಂಟೆ ಜಮೀನು ಪಾರ್ವತಿ, ಶಿವಪ್ಪ, ಅಯ್ಯಪ್ಪ ಹಾಗೂ ಗಂಗಮ್ಮ ರವರಿಗೆ ಸೇರಿರುತ್ತದೆ ಎಂದರೆ ಸರಿ. ಸಾಯಿಬಣ್ಣ ರವರು ಸರ್ವೆ ನಂ. 37/2 ರಲ್ಲಿನ 1 ಎಕರೆ 29 ಗುಂಟೆ ಜಮೀನಿನ ಮಾಲಿಕ ಹಾಗೂ ಕಬ್ಜೆದಾರ ಆಗಿರುತ್ತಾರೆ ಎಂದರೆ ಸರಿ. ಅದೇ ರೀತಿ ಮಲ್ಲಯ್ಯ ರವರು ಸರ್ವೆ ನಂ. 37/1 ರಲ್ಲಿನ 1 ಎಕರೆ 10 ಗುಂಟೆ ಜಮೀನಿನ ಮಾಲಿಕರು ಹಾಗೂ ಕಬ್ಜೆದಾರ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಜಮೀನಿಗೆ ಹೊಂದಿಕೊಂಡು ಸದರಿ ಮಲ್ಲಯ್ಯ ರವರು ಜಮೀನು ಹೊಂದಿರುವುದಿಲ್ಲ. ಹಣಮಂತರವರು ಸರ್ವೆ ನಂ. 37/1 ರಲ್ಲಿನ 1 ಎಕರೆ 09 ಗುಂಟೆ ಜವೀನಿನ ಮಾಲಿಕ ಹಾಗೂ ಕಬ್ಜೆದಾರ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಮ್ಮ ಜಮೀನು ಅಳತೆ ಮಾಡಲು ನಾನೇ ಅರ್ಜಿ ಸಲ್ಲಿಸಿದ್ದೇನು. ದಿಃ 30.05.2022 ರಂದು ಸದರಿ ಅರ್ಜಿ ಸಲ್ಲಿಸಿದ್ದೇನು. ಆ ಪ್ರಕಾರ ಭೂ ಮಾಪಕರು ಬಂದು ನಮ್ಮ ಜಮೀನು ಅಳತೆ ಮಾಡಿ ಹದ್ದು ಬಸ್ತು ಮಾಡಿ ಗುರುತಿಸಿದ್ದರು. ನೀವು ಹದ್ದುಬಸ್ತು ಗುರುತಿಸಲು ಅರ್ಜಿ ಸಲ್ಲಿಸಿದ್ದರೋ ಅಥವಾ ಫಾರಂ ನಂ.10 ತಯಾರಿಸಲು ಅರ್ಜಿ ಸಲ್ಲಿಸಿದ್ದಿರೋ ಎಂದರೆ ಸಾಕ್ಷಿ ಪಾರಂ ನಂ. 10 ಮೊದಲೇ ಇತ್ತು ಎಂದು ನುಡಿಯುತ್ತಾರೆ. ಭೂ ಮಾಪಕರು ಅಳತೆ

ಮಾಡುವ ಪೂರ್ವದಲ್ಲಿ ವಾದಿಯರಿಗೆ ನೋಟಿಸ್ ನೀಡಿದ್ದರು. ವಾದಿಯರಿಗೆ ನೋಟಿಸ್ ನೀಡದೆ ನಾವು ಪಾರಂ ನಂ. 10 ಹಾಗೂ ಹದ್ದುಬಸ್ತು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಡಿ-15,18 ಹಾಗೂ 21 ಮತ್ತು 24 ರ ನೋಟಿಸ್ ಗಳಲ್ಲಿ ವಾದಿಯರ ಸಹಿಗಳು ಇಲ್ಲ ಎಂದರೆ ಸಾಕ್ಷಿ ಅವರಿಗೆ ಅಂಚೆ ಮೂಲಕ ನೋಟಿಸ್ ಜಾರಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ನೋಟಿಸ್ ಜಾರಿಯಾಗಿರುವುದನ್ನು ತೋರಿಸಲು ನಾನು ದಾಖಲೆಗಳನ್ನು ಹಾಜರು ಮಾಡಿಲ್ಲ. ನಿಡಿ-15, 18, 21 ಮತ್ತು 24 ರ ನೋಟಿಸ್ ಗಳನ್ನು ಕೇವಲ ಹದ್ದು ಬಸ್ತು ಗುರುತಿಸಲು ನೀಡಲಾಗಿತ್ತು ಎಂದರೆ ಸರಿ. ನಾವು ಭೂ ಮಾಪಕರೊಂದಗೆ ಶಾಮೀಲಾಗಿ ಹದ್ದು ಬಸ್ತು ದಾಖಲೆ ಸೃಷ್ಟಿ ಮಾಡಿಕೊಂಡಿದೆವೆ ಎಂದರೆ ಸರಿಯಲ್ಲ. ಯಾವುದೇ ಅಳತೆ ಮಾಡಿಸದಿದ್ದರು ವಾದಿಯರು ನಮ್ಮ ಜಮೀನು ಒತ್ತುವರಿ ಮಾಡಿದ್ದಾರೆಂದು ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೆನೆಂದರೆ ಸರಿಯಲ್ಲ. ವಾದಿಯರು ಒತ್ತುವರಿ ಮಾಡಿದ್ದ ಜಮೀನನ್ನು ದಿಃ 24.09.2022 ರಂದು ನನಗೆ ಬಿಟ್ಟು ಕೊಟ್ಟಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ನಂತರ ದಿಃ 30.06.2023 ರಂದು ವಾದಿಯರು ಮತ್ತೆ ನಮ್ಮ ಜಮೀನು ಒತ್ತುವರಿ ಮಾಡಿದ್ದಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ದಿಃ 03.07.2023 ರಂದು ನಾವು ನಮ್ಮ ಜಮೀನು ಸ್ವಾದೀನ ನೀಡುವಂತೆ ಕೇಳಿದ್ದೆವು ಹಾಗೂ ವಾದಿಯರು ಜಮೀನು ನೀಡಲು ನಿರಾಕರಿಸಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ಷೆನೆಂದರೆ ಸರಿಯಲ್ಲ.

ನಾನು ಹಾಗೂ ನನ್ನ ಸಹೋದರರು ವಿಭಾಗ ಪತ್ರ ಮಾಡಿಕೊಂಡಿಲ್ಲ. ಹಿಂದಿನಿಂದಲೂ ನಾವು ನಮ್ಮ ಜಮೀನು ಹಾಗು ವಾದಿಯರು ತಮ್ಮ ಜವೀನು ಸಾಗುವಳಿ ಮಾಡುತ್ತಾ ಬಂದಿದ್ದರೂ ಸಹ ವಾದಿಯರು ನಮ್ಮ ಜಮೀನು ಒತ್ತುವರಿ ಮಾಡಿದ್ದಾರೆಂದು ಸುಳ್ಳು ಸಾಕ್ಷ್ಯನುಡಿಯುತ್ತಿದೆನೆಂದರೆ ಸರಿಯಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ